# ಮೂವರು ಕಳ್ಳರು!



**ಇಂಟರ್‌ನೆಟ್ ಬಳಕೆದಾರರನ್ನು ಬೆದರಿಸುತ್ತಿರುವ ಮೂವರು ಕಳ್ಳರು; 'ಡಾರ್ಕ್‌ಗೇಟ್', 'ಎಮೋಟೆಟ್' ಮತ್ತು 'ಲೋಕಿಬಾಟ್'**

■ ಶಶಿಕುಮಾರ್ ಸಿ.

ಇಂಟರ್‌ನೆಟ್ ಬಳಸುತ್ತಿರುವವರು ಆ ಮೂವರು ಕಳ್ಳರ ಬಗ್ಗೆ ಎಚ್ಚರಿಕೆ ವಹಿಸುವಂತೆ ಸೈಬರ್ ತಜ್ಞರು ಸೂಚಿಸಿದ್ದಾರೆ. ಹಾಗಾದರೆ ಯಾರು ಆ ಮೂವರು. ಯೋಚಿಸಬೇಡಿ. ಸೈಬರ್ ತಜ್ಞರು ಎಚ್ಚರಿಕೆ ವಹಿಸುವಂತೆ ಹೇಳಿರುವುದು, ಇಂಟರ್‌ನೆಟ್ ಬಳಸುತ್ತಿರುವವರಿಗೆ ತೀವ್ರವಾಗಿ ಕಾಡುತ್ತಿರುವ ಮೂರು ಮಾಲ್‌ವೇರ್‌ಗಳ ಬಗ್ಗೆ.

ಭದ್ರತಾ ಸಂಶೋಧನಾ ಕಂಪನಿಯಾಗಿರುವ 'ಕ್ಯಾಸ್ಪರ್ಸ್ಕಿ' (Kaspersky) ಮಾಲ್‌ವೇರ್‌ಗಳಿಗೆ ಸಂಬಂಧಿಸಿದಂತೆ ವರದಿಯೊಂದನ್ನು ತಂತ್ರಜ್ಞಾನ ಕ್ಷೇತ್ರದೊಂದಿಗೆ ಹಂಚಿಕೊಂಡಿದ್ದು, ಆ ವರದಿಯಲ್ಲಿ ಇಂಟರ್‌ನೆಟ್ ಬಳಸುತ್ತಿರುವವರನ್ನು ಹೆಚ್ಚಾಗಿ ಕಾಡುತ್ತಿರುವ ಮೂರು ಮಾಲ್‌ವೇರ್ ತಳಿಗಳನ್ನು ಹೆಸರಿಸಿದ್ದಾರೆ. ಅವುಗಳೇ 'ಡಾರ್ಕ್‌ಗೇಟ್', 'ಎಮೋಟೆಟ್' ಮತ್ತು 'ಲೋಕಿಬಾಟ್'.

ಈ ಮಾಲ್‌ವೇರ್ ತಳಿಗಳ ಸೋಂಕು ಇಂಟರ್‌ನೆಟ್ ಬಳಕೆದಾರರನ್ನು ಸಾಕಷ್ಟು ಸಂಕಷ್ಟಕ್ಕೆ ದೂಡುತ್ತಿವೆ. ಇವು ಗೌಪ್ಯ ಮಾಹಿತಿಗಳನ್ನು ಕದ್ದು, ದುರ್ಬಳಕೆ ನಿಟ್ಟಿನಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿವೆ. ಹೀಗಾಗಿ ಇವುಗಳ ಬಗ್ಗೆ ಜಾಗ್ರತೆ ವಹಿಸುವಂತೆ ತಜ್ಞರು ಎಚ್ಚರಿಕೆ ನೀಡಿದ್ದಾರೆ.

ಈಗಂತೂ ಸೈಬರ್ ವಂಚನೆಗಳ ಪ್ರಮಾಣ ದಿನೇ ದಿನೇ ಹೆಚ್ಚಾಗುತ್ತಿದೆ. ಸೈಬರ್ ದಾಳಿಕೋರರು ತಮ್ಮ ಕಾರ್ಯಸಾಧನೆಗೋಸ್ಕರ ಹೊಸ ಹೊಸ ಮಾಲ್‌ವೇರ್‌ಗಳನ್ನು ಸೃಷ್ಟಿಸಿ ಅವುಗಳನ್ನು ಎಲ್ಲೆಡೆ ಹರಿಬಿಡುತ್ತಿದ್ದಾರೆ. ಇದಕ್ಕೆ ಸೋಷಿಯಲ್ ಮೀಡಿಯಾವೂ ಹೊರತಲ್ಲ. ಇಂತಹ ಪ್ರಕರಣಗಳು ಈಚೆಗೆ ಸಾಮಾನ್ಯವಾಗಿದ್ದು, ಈ ಬಗ್ಗೆ ಎಚ್ಚರಿಕೆ ವಹಿಸುವುದು ಬಹಳ ಅಗತ್ಯ.

ಕಂಪ್ಯೂಟರ್ ಅಥವಾ ನೆಟ್‌ವರ್ಕ್‌ನಿಂದ ಬಳಕೆದಾರರ ಡೇಟಾಗೆ ಕನ್ನ ಹಾಕಲು ಅಥವಾ ಸೂಕ್ಷ್ಮ ಮಾಹಿತಿಯ ಬಗ್ಗೆ ಕೇಂದ್ರೀಕರಿಸಿ ಅದಕ್ಕೆ ದುರುದ್ದೇಶಪೂರಿತ ವೈರಸ್ ಹರಿಬಿಡುವ ಅಥವಾ ಬಳಸುವ ಕ್ರಿಯೆಗೆ ಮಾಲ್‌ವೇರ್ ದಾಳಿ ಎನ್ನಲಾಗುತ್ತದೆ. ಹೊಸದಾಗಿ ಹುಟ್ಟಿಕೊಂಡಿರುವ ಈ ಮೂರು ಮಾಲ್‌ವೇರ್ ತಳಿಗಳು ಇಂಟರ್‌ನೆಟ್ ಬಳಕೆದಾರರನ್ನು ಬಲೆಗೆ ಬೀಳಿಸಲು ಕಾಯುತ್ತಿವೆ ಎಂಬುದು ತಜ್ಞರ ಅಭಿಪ್ರಾಯ.

'ಕ್ಯಾಸ್ಪರ್ಸ್ಕಿ' ಪ್ರಕಾರ, 'ಡಾರ್ಕ್‌ಗೇಟ್', 'ಎಮೋಟೆಟ್' ಮತ್ತು 'ಲೋಕಿಬಾಟ್' ಮಾಲ್‌ವೇರ್ ತಳಿಗಳು ಬಳಕೆದಾರರ ಡೇಟಾವನ್ನು ಕದಿಯುತ್ತಿವೆ.

## ಡಾರ್ಕ್‌ಗೇಟ್

2023ರ ಜೂನ್‌ನಲ್ಲಿ 'ಕ್ಯಾಸ್ಪರ್ಸ್ಕಿ'ಯ ತಜ್ಞರು ಡಾರ್ಕ್‌ಗೇಟ್ ಎಂಬ ಹೊಸ ಲೋಡರ್ ಅನ್ನು ಕಂಡುಹಿಡಿದ್ದರು. ಇದು ಬಹುಫೀಚರ್ ಹೊಂದಿದೆ ಎಂಬುದನ್ನೂ ಪತ್ತೆಹಚ್ಚಲಾಗಿತ್ತು. ಇದರ ಕಾರ್ಯವು ಬ್ರೌಸರ್ ಹಿಸ್ಟರಿ ಕಳ್ಳತನ, ಫೈಲ್ ಮ್ಯಾನೇಜ್ಮೆಂಟ್ ಮೇಲೆ ನಿಗಾವಹಿಸುವುದು, ರಿವರ್ಸ್ ಪ್ರಾಕ್ಸಿ ಮಾಡುವುದು, ಹಿಡನ್ ವಿಎನ್‌ಸಿ ಸೇರಿದಂತೆ ಹಲವು ಫೀಚರ್‌ಗಳನ್ನು ಹೊಂದಿದೆ. ಇಂಟರ್‌ನೆಟ್ ಬಳಕೆದಾರರಿಗೆ ಹಾನಿ ತರುವ ಸಾಮರ್ಥ್ಯ ಹೊಂದಿರುವ ಡಾರ್ಕ್‌ಗೇಟ್, ನಾಲ್ಕು ಹಂತದಲ್ಲಿ ಕಾರ್ಯನಿರ್ವಹಿಸುತ್ತದೆ.

## ಎಮೋಟೆಟ್

2021ರಲ್ಲಿ ಈ ಮಾಲ್‌ವೇರ್ ತೆಗೆಯಲಾಗಿತ್ತು. ಆದರೂ ಇದು ಮತ್ತೆ ವಕ್ಕರಿಸಿಕೊಂಡಿದೆ. ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿರುವ ಈ ಮಾಲ್‌ವೇರ್‌ನ ಚಟುವಟಿಕೆಗಳನ್ನು ಈಚೆಗೆ ಗುರುತಿಸಲಾಗಿದೆ ಎಂದು 'ಕ್ಯಾಸ್ಪರ್ಸ್ಕಿ' ವರದಿಯಲ್ಲಿ ಉಲ್ಲೇಖಿಸಲಾಗಿದೆ. ಈ ಮಾಲ್‌ವೇರ್‌ನ ದುರುದ್ದೇಶಪೂರಿತ ಒನ್‌ನೋಟ್ (OneNote) ಫೈಲ್‌ಗಳನ್ನು ಹರಿಬಿಡಲಾಗುತ್ತಿದೆ. ಇದರ ಲಿಂಕ್‌ಗಳನ್ನು ಬಳಕೆದಾರರು ತೆರೆದಾಗ ಅದು ಕಾರ್ಯಗತಗೊಳ್ಳುತ್ತಿದೆ. ಬಳಿಕ ಕಂಪ್ಯೂಟರ್ ಅಥವಾ ಡಿವೈಸ್‌ಗೆ ಲಗ್ಗೆ ಇಟ್ಟು ಅದರಲ್ಲಿನ ಎಲ್ಲ ಮಾಹಿತಿಯನ್ನೂ ಕದಿಯುತ್ತದೆ. ■

### ಲೋಕಿಬಾಟ್

ಈ ಮಾಲ್‌ವೇರ್ ತಳಿಯು ಕಾರ್ಗೋ ಶಿಪ್ ಕಂಪನಿಗಳನ್ನು ಗುರಿಯಾಗಿಸಿಕೊಂಡು ನಡೆಸುವ ಒಂದು ರೀತಿಯ ಫಿಶಿಂಗ್ ಅಭಿಯಾನ. ಇದು ಸಹ ಮಾಹಿತಿ ಕದಿಯುವ ಖದೀಮ. 2016ರಲ್ಲಿ ಮೊದಲ ಬಾರಿಗೆ ಇದನ್ನು ಗುರುತಿಸಲಾಗಿತ್ತು. ಬ್ರೌಸರ್‌ಗಳು ಮತ್ತು ಎಫ್‌ಟಿಪಿ ಕ್ಲೈಂಟ್‌ಗಳು ಸೇರಿದಂತೆ ವಿವಿಧ ಅಪ್ಲಿಕೇಶನ್‌ಗಳಿಂದ ದಾಖಲೆಗಳು, ಆಧಾರಗಳನ್ನು ಕದಿಯಲೆಂದೇ ಲೋಕಿಬಾಟ್ ವಿನ್ಯಾಸಗೊಂಡಿದೆ.

ನಾವೆಲ್ಲರೂ ಇಂಟರ್‌ನೆಟ್ ಅನ್ನು ಬಹುವಾಗಿ ಅವಲಂಬಿಸಿರುವ ಕಾರಣ ಒಂದಲ್ಲ ಒಂದು ರೀತಿಯಲ್ಲಿ ಇಂತಹ ಮಾಲ್‌ವೇರ್‌ಗಳು ಸದಾ ನಮ್ಮನ್ನು ಕಾಡುತ್ತಲೇ ಇರುತ್ತವೆ. ಹೀಗಾಗಿ ಇಂಟರ್‌ನೆಟ್ ಬಳಕೆ ವೇಳೆ ಎಚ್ಚರಿಕೆ ಇರಬೇಕು. ಗೊತ್ತಿಲ್ಲದ ಲಿಂಕ್ ಮತ್ತು ಅಟ್ಯಾಚ್ ಫೈಲ್‌ಗಳನ್ನು ಕ್ಲಿಕ್ಕಿಸುವ ಮುನ್ನ ಆ ಬಗ್ಗೆ ಸೂಕ್ಷ್ಮವಾಗಿ ಪರಿಶೀಲನೆ ನಡೆಸಬೇಕು. ಕಾಲ ಕಾಲಕ್ಕೆ ಡಿವೈಸ್‌ನ ಸಾಫ್ಟ್‌ವೇರ್ ಅಪ್‌ಡೇಟ್ ಮಾಡಿಕೊಳ್ಳಬೇಕು ಮತ್ತು ವೈರಸ್ ದಾಳಿಯನ್ನು ತಡೆಯುವ ವಿಶ್ವಾಸಾರ್ಹ ಭದ್ರತಾ ಪರಿಹಾರ ಕ್ರಮಗಳನ್ನೂ ಬಳಸಬೇಕು. ನಂಬಿಕಾರ್ಹ ಮೂಲಗಳ ಅಪ್ಲಿಕೇಶನ್, ಲಿಂಕ್, ಫೈಲ್‌ಗಳನ್ನು ಮಾತ್ರ ಕ್ಲಿಕ್ಕಿಸಬೇಕು.